# ಡೊನಾಲ್ಡ್ ವ್ಯಾಟ್ಸನ್ನರ ಸಸ್ಯಜನ್ಯ ಆಹಾರ ಪದ್ಧತಿ








**ಮಾಂಸ, ಮೀನು, ಮೊಟ್ಟೆ, ಹಾಲು, ಜೇನುತುಪ್ಪ ಇದ್ಯಾವುದನ್ನೂ ಸೇವಿಸದೆ ಜೀವನ ಸಾಗಿಸುವುದು ಸಾಧ್ಯವೆ? ಸಾಧ್ಯ ಎನ್ನುತ್ತಾರೆ ವೀಗಾನ್ ಆಹಾರ ಪದ್ಧತಿಯ ಪ್ರತಿಪಾದಕರು. ಇದರಿಂದ ಪ್ರಾಣಿಹಿಂಸೆ ತಡೆಯುವುದಲ್ಲದೆ ಆರೋಗ್ಯವೂ ಸುಧಾರಿಸುತ್ತದೆ ಎನ್ನುವುದು ಅವರ ವಾದ.**

■ **ಕೆ.ವಿ.ರಂಗನಾಥಾಚಾರ್**

ವೀಗಾನ್ ಆಹಾರ ಪದ್ಧತಿಯನ್ನು ಅನುಸರಿಸುವವರು ಮಾಂಸ, ಮೀನು, ಮೊಟ್ಟೆ, ಹಾಲು, ಹಾಲಿನ ಉತ್ಪನ್ನಗಳು, ಜೇನುತುಪ್ಪ ಮುಂತಾದ ಯಾವುದೇ ಪ್ರಾಣಿಜನ್ಯ ಆಹಾರವನ್ನು ಸೇವಿಸುವುದಿಲ್ಲ. ಅಮೆರಿಕಾದಲ್ಲಿ ಸುಮಾರು 75 ಲಕ್ಷ, ಇಂಗ್ಲೆಂಡ್‌ನಲ್ಲಿ 3 ಲಕ್ಷ, ಯೂರೋಪಿನ ಅನೇಕ ದೇಶಗಳಲ್ಲಿ ಲಕ್ಷಾಂತರ ಮಂದಿ ವೀಗಾನ್ ಆಹಾರ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಇಸ್ರೇಲ್ ಜನಸಂಖ್ಯೆಯ ಶೇಕಡಾ 5ರಷ್ಟು ಜನ ಈ ಆಹಾರ ಪದ್ಧತಿಯನ್ನು ಅನುಸರಿಸಿ ಜಗತ್ತಿನಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಪ್ರಾಣಿಹಿಂಸೆ ಮಾಡಬಾರದು ಎನ್ನುವ ತತ್ವವನ್ನು ಇಟ್ಟುಕೊಂಡು, ವೀಗಾನ್ ಆಹಾರ ಪದ್ಧತಿ ಜಗತ್ತಿನಲ್ಲಿ ಇತ್ತೀಚೆಗೆ ಜನಪ್ರಿಯವಾಗುತ್ತಿದೆ. ದಿನೇ ದಿನೇ ಈ ಆಹಾರ ಪದ್ಧತಿಯನ್ನು ಪಾಲಿಸುವ ಜನ ಹೆಚ್ಚಾಗಲು ಮೂಲ ಕಾರಣ, ಇಂಗ್ಲೆಂಡ್ ದೇಶದ ಕರುಣಾಮಯಿ ವ್ಯಕ್ತಿ ಡೊನಾಲ್ಡ್ ವ್ಯಾಟ್ಸನ್.

ಡೊನಾಲ್ಡ್ ವ್ಯಾಟ್ಸನ್ (ಜನನ: 2ನೇ ಸೆಪ್ಟೆಂಬರ್ 1910) ಇಂಗ್ಲೆಂಡಿನ ದಕ್ಷಿಣ ಯಾರ್ಕ್‌ಶೈರ್‌ನ ಮೆಕ್ಸ್‌ಬರೋದವರು. ಬಾಲ್ಯವನ್ನು ತಮ್ಮ ಚಿಕ್ಕಪ್ಪ ಜಾರ್ಜ್ ಅವರ ತೋಟದ ಮನೆಯಲ್ಲಿ ಕಳೆದರು. ಒಮ್ಮೆ ಅವರ ಚಿಕ್ಕಪ್ಪನವರ ಫಾರಂನಲ್ಲಿ ಒಂದು ಹಂದಿಯನ್ನು ಕೊಲ್ಲಲಾಯಿತು. ಅದರ ನೋವು ಡೊನಾಲ್ಡ್ ಅವರನ್ನು ಬಹುವಾಗಿ ಕಾಡಿತು. ಅಂದಿನಿಂದಲೇ ತಾವು ಎಂದಿಗೂ ಮಾಂಸಾಹಾರ ಸೇವನೆ ಮಾಡುವುದಿಲ್ಲವೆಂದು ನಿರ್ಧರಿಸಿದರು. ಆಗ ಅವರಿಗೆ ಕೇವಲ 14 ವರ್ಷ ವಯಸ್ಸು. ತಮ್ಮ 95ನೇ ವಯಸ್ಸಿನಲ್ಲಿ ನಿಧನರಾಗುವ ವರೆಗೂ ಅವರು ಮಾಂಸಾಹಾರ ಸೇವಿಸಲಿಲ್ಲ.

ತಮ್ಮ 32ನೇ ವಯಸ್ಸಿನಲ್ಲಿ ಅವರು ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನೂ ತ್ಯಜಿಸಿದರು. ಹಾಲಿಗಾಗಿ ಹಸುಗಳನ್ನು ಪದೇ ಪದೇ ಗರ್ಭ ಧರಿಸುವಂತೆ ಮಾಡಲಾಗುತ್ತಿತ್ತು. ಹೆಚ್ಚು ಹಾಲು ಕೊಡಲು ಕೃತಕ ರಾಸಾಯನಿಕ ವಸ್ತುಗಳನ್ನು ಅವುಗಳಿಗೆ ಕೊಡಲಾಗುತ್ತಿತ್ತು. ಗಂಡು ಕರು ಹುಟ್ಟಿದರೆ ತಾಯಿಯಿಂದ ಅದನ್ನು ಬೇರ್ಪಡಿಸಿ ಕಸಾಯಿಖಾನೆಗೆ ಕಳುಹಿಸುತ್ತಿದ್ದರು. ಹಸು ಕೊಡುವ ಹಾಲಿನ ಪ್ರಮಾಣ ಕಡಿಮೆಯಾದಾಗ ಅವನ್ನು ಕಸಾಯಿಖಾನೆಗೆ ಕಳುಹಿಸಲಾಗುತ್ತಿತ್ತು. ಇದರಿಂದ ನಾವು ಹಾಲು ಸೇವಿಸುವುದರಿಂದಲೂ ಪ್ರಾಣಿ ಹಿಂಸೆಯಾಗುತ್ತದೆ ಎಂದು ನಿರ್ಧರಿಸಿದ ಡೊನಾಲ್ಡ್ ವ್ಯಾಟ್ಸನ್ ತಮ್ಮ 32ನೇ ವಯಸ್ಸಿನಲ್ಲಿ ಹಾಲು ಹಾಗೂ ಹಾಲಿನ ಉತ್ಪನ್ನಗಳ ಸೇವನೆಯನ್ನು ನಿಲ್ಲಿಸಿದರು.

1944 ರಲ್ಲಿ ವ್ಯಾಟ್ಸನ್ನರು ತಮ್ಮ ಹೆಂಡತಿ ಹಾಗೂ ನಾಲ್ಕು ಜನ ಸ್ನೇಹಿತರೊಂದಿಗೆ ಸೇರಿ ಜಗತ್ತಿನ ಮೊದಲ 'ವೀಗಾನ್ ಸೊಸೈಟಿ'ಯನ್ನು ಸ್ಥಾಪಿಸಿದರು. **Vegetarian** ಎಂಬ ಪದದ ಮೊದಲ ಮೂರು ಅಕ್ಷರ ಹಾಗೂ ಕೊನೆಯ ಎರಡು ಅಕ್ಷರಗಳನ್ನು ಸೇರಿಸಿ **vegan** ಎಂಬ ಹೊಸ ಪದವನ್ನು ಹುಟ್ಟುಹಾಕಿದರು. ಇಂದು ಈ ವೀಗಾನ್ ಪದವನ್ನು ಜಗತ್ತಿನ ಎಲ್ಲೆಡೆ ಉಪಯೋಗಿಸಲಾಗುತ್ತಿದೆ.

ಡೊನಾಲ್ಡ್ ವ್ಯಾಟ್ಸನ್ ಜೀವನೋಪಾಯಕ್ಕಾಗಿ ಮರಗೆಲಸದ ಉಪಾಧ್ಯಾಯರಾಗಿದ್ದರು. ಸಾವಿರಾರು ವಿದ್ಯಾರ್ಥಿಗಳಿಗೆ ಮರಗೆಲಸದಲ್ಲಿ ತರಬೇತಿಯನ್ನು ನೀಡಿದರು. 1944ರಲ್ಲಿ ವೀಗಾನ್ ಸೊಸೈಟಿಯನ್ನು ಸ್ಥಾಪಿಸಿ